ಸಂಖ್ಯೆ: ಇಡಿ/ಕೆಇಎ/ಡಿಸಿಇಟಿ/ಸಿಆರ್–3/2025

ದಿನಾಂಕ: 02–07–2025

**ಡಿಪ್ಲೊಮಾ ಪದವೀಧರ ಅಭ್ಯರ್ಥಿಗಳಿಗೆ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷದ ಅಥವಾ 3ನೇ ಸೆಮಿಸ್ಟರ್‌ನ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಪ್ರವೇಶಕ್ಕೆ ಹಾಗು ಮೊದಲನೇ ವರ್ಷದ ಆರ್ಕಿಟೆಕ್ಚರ್ ಕೋರ್ಸು ಪ್ರವೇಶಾತಿಗೆ ಮೊದಲನೇ ಸುತ್ತಿನ ಸೀಟು ಹಂಚಿಕೆ ವೇಳಾಪಟ್ಟಿ**

2ನೇ ವರ್ಷದ ಅಥವಾ 3ನೇ ಸೆಮಿಸ್ಟರ್‌ನ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಕ್ಕೆ ಮತ್ತು ಮೊದಲನೇ ವರ್ಷದ ಆರ್ಕಿಟೆಕ್ಚರ್ ಕೋರ್ಸುಗಳಿಗೆ ಸರ್ಕಾರವು ನೀಡಿರುವ ಸೀಟ್ ಮ್ಯಾಟ್ರಿಕ್ಸ್ ಅನ್ನು ಮತ್ತು ಶುಲ್ಕದ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ. ಅಭ್ಯರ್ಥಿಗಳು ತಮಗೆ ಆಸಕ್ತಿ ಇರುವ ಎಲ್ಲಾ ಕೋರ್ಸುಗಳಿಗೂ ಇಚ್ಛೆಗಳನ್ನು ಆದ್ಯತಾ ಕ್ರಮದಲ್ಲಿ ದಾಖಲಿಸಬೇಕು. ವಿವಿಧ ಕೋರ್ಸುಗಳಿಗೆ ಕಾಲ ಕಾಲಕ್ಕೆ ಸರ್ಕಾರವು ನೀಡುವ ಸೀಟ್ ಮ್ಯಾಟ್ರಿಕ್ಸ್ ಅನ್ನು ಆಧರಿಸಿ ಮತ್ತು ಅಭ್ಯರ್ಥಿಗಳು ನಮೂದಿಸಿದ ಇಚ್ಛೆಗಳನ್ನು ಪರಿಗಣಿಸಿ ಮೆರಿಟ್ ಆಧಾರದ ಮೇಲೆ ರೋಸ್ಟರ್ ಪದ್ಧತಿಯನ್ನು ಅನುಸರಿಸಿ ಸೀಟು ಹಂಚಿಕೆಯನ್ನು ಮಾಡಲಾಗುತ್ತದೆ.

**(OPTIONS) ಇಚ್ಛೆ / ಆಯ್ಕೆಯನ್ನು ದಾಖಲಿಸುವ ಬಗ್ಗೆ ಮುಖ್ಯ ಸೂಚನೆ**

ಮೊದಲನೇ ಸುತ್ತಿನ ಸೀಟು ಹಂಚಿಕೆಯ ಮೊದಲು ಅಭ್ಯರ್ಥಿಗಳು ದಾಖಲಿಸುವ ಇಚ್ಛೆ / ಆಯ್ಕೆಗಳೇ ಎಲ್ಲಾ ಸುತ್ತಿನ ಸೀಟು ಹಂಚಿಕೆಗೆ ಉಳಿಯುತ್ತದೆ. ಹೊಸದಾಗಿ ಇಚ್ಛೆ / ಆಯ್ಕೆಗಳನ್ನು ದಾಖಲಿಸಲು ಅಭ್ಯರ್ಥಿಗಳಿಗೆ ಅವಕಾಶವಿರುವುದಿಲ್ಲ. ಮೊದಲ ಸುತ್ತಿನ ಸೀಟು ಹಂಚಿಕೆಗೆ ಮುಂಚೆ ದಾಖಲಿಸುವ ಇಚ್ಛೆ / ಆಯ್ಕೆಗಳು ಅಂತಿಮ ಇಚ್ಛೆ / ಆಯ್ಕೆಗಳು ಆಗುತ್ತದೆ. ಅಭ್ಯರ್ಥಿಗಳು ದಾಖಲಿಸಿದ ಮೇಲಿನ ಕ್ರಮಾಂಕದ (Higher Order) ಇಚ್ಛೆ / ಆಯ್ಕೆಗಳನ್ನು ತೆಗೆದು ಹಾಕಲು ಅಥವಾ ಕ್ರಮಾಂಕಗಳನ್ನು ಬದಲಾಯಿಸಲು ಅವಕಾಶವಿರುತ್ತದೆ. ಹೊಸದಾಗಿ ಯಾವುದಾದರೂ ಕಾಲೇಜು ಅಥವಾ ಕೋರ್ಸುಗಳು ಸೀಟ್ ಮ್ಯಾಟ್ರಿಕ್ಸ್‌ಗೆ ಸೇರ್ಪಡೆಯಾದಲ್ಲಿ ಮಾತ್ರ ಹೊಸದಾಗಿ ಇಚ್ಛೆ / ಆಯ್ಕೆಗಳನ್ನು ದಾಖಲಿಸಲು ಅವಕಾಶ ಕಲ್ಪಿಸಲಾಗುವುದು.

ಇಚ್ಛೆ / ಆಯ್ಕೆಗಳನ್ನು ಆದ್ಯತಾ ಕ್ರಮದಲ್ಲಿ ದಾಖಲಿಸುವ ಬಗ್ಗೆ, ಅಣುಕು ಸೀಟು ಹಂಚಿಕೆ ಹಾಗು ನಂತರದ ಕ್ರಮಗಳು, ಮೊದಲ ಸುತ್ತಿನ ಸೀಟು ಹಂಚಿಕೆ ಹಾಗು ಹಂಚಿಕೆಯ ನಂತರ ವಹಿಸಬೇಕಾದ ಕ್ರಮಗಳ ಬಗ್ಗೆ ವಿವರಗಳನ್ನು ಡಿಸಿಇಟಿ–2025ರ ಮಾಹಿತಿ ಪುಸ್ತಕದಲ್ಲಿ ನೀಡಿದ್ದು, ಅಭ್ಯರ್ಥಿಗಳು ತಪ್ಪದೆ ಓದಿ ಮನನ ಮಾಡಿಕೊಳ್ಳಲು ಸೂಚಿಸಿದೆ.

**IMPORTANT INSTRUCTIONS ON OPTION ENTRY:**

The options entered by the candidate for the first round will remain same for all the rounds of seat allotment. The candidates will not be allowed to enter options again. Candidate may delete or alter order of higher options. The candidate will be allowed to add new options for any colleges and course that came into the seat matrix after the first round. For activities / availability of seats during counselling:

.......2

| Sl. No. | Option Entry Schedule – First Round | |
|---|---|---|
| | Particulars | Date and Time |
| 01 | ಸೀಟ್ ಮ್ಯಾಟ್ರಿಕ್ಸ್ ಮತ್ತು ಶುಲ್ಕದ ವಿವರಗಳ ಪ್ರಕಟಣೆ – Seat Matrix and Fees | 03-07-2025 |
| 02 | ಇಚ್ಛೆ / ಆಯ್ಕೆಗಳನ್ನು ದಾಖಲಿಸುವುದು. (ಆದ್ಯತಾ ಕ್ರಮದಲ್ಲಿ) – Options entry in the order of priority | From 11.00 on 03-07-2025 to 05-07-2025 up to 11.00 am |
| 03 | ಅಣುಕು ಸೀಟು ಹಂಚಿಕೆಯ ಫಲಿತಾಂಶ – Publication of mock seat allotment result | 07-07-2025 after 12.00 pm |
| 04 | ಆಯ್ಕೆಗಳನ್ನು ಬದಲಾಯಿಸಲು ಅವಕಾಶ (ಸೇರಿಸಿ / ಅಳಿಸಿ / ಬದಲಾಯಿಸಿ / ಮಾರ್ಪಡಿಸಿ) Add / Modify / Re-order/Delete the options | From 1.00 pm on 07-07-2025 to 08-07-2025 up to 04.00 pm |
| 05 | ನೈಜ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆ Real seat allotment results | 09-07-2025 after 6.00 pm |
| 06 | ಸೀಟು ಹಂಚಿಕೆಯಾದ ಅಭ್ಯರ್ಥಿಗಳು Choice ಅನ್ನು ಆಯ್ಕೆ ಮಾಡಲು (ನಾಲ್ಕು Choice ಗಳಲ್ಲಿ ಸೂಕ್ತವಾದ Choice ಅನ್ನು ಆಯ್ಕೆ ಮಾಡಿ) CHOICE Selection | From 11.00 am 10-07-2025 to 13-07-2025 upto 11.59 pm |
| 07 | Choice-1 and Choice-2 ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಚಲನ್ ಡೌನ್‌ಲೋಡ್ ಮಾಡುವುದು Downloading of challan by Choice -1 and Choice-2 candidates | From 2.00 pm 10-07-2025 to 14-07-2025 upto 11.00 am |
| 08 | ಶುಲ್ಕ ಪಾವತಿ ಮಾಡುವುದು – Choice-1 and Choice-2 ಆಯ್ಕೆ ಮಾಡಿಕೊಂಡು ಚಲನ್ ಡೌನ್‌ಲೋಡ್ ಮಾಡಿದ ಅಭ್ಯರ್ಥಿಗಳಿಗೆ ಮಾತ್ರ Payment of fees by Choice -1 and Choice-2 candidates | From 11.00 am 11-07-2025 to 15-07-2025 upto 4.00 pm (During Banking Hours) |
| 09 | Choice-1 ಆಯ್ಕೆ ಮಾಡಿ ಶುಲ್ಕ ಪಾವತಿ ಮಾಡಿದ ಅಭ್ಯರ್ಥಿಗಳು Seat Confirmation Slip ಡೌನ್‌ಲೋಡ್ ಮಾಡಿಕೊಳ್ಳುವುದು – ಹಾಗು ಪ್ರವೇಶ ಪಡೆಯಲು ಕಾಲೇಜಿಗೆ ವರದಿ ಮಾಡುವುದು | 11-07-2025 to 16-07-2025 |

- ಈ ಮೇಲಿನ ವೇಳಾಪಟ್ಟಿ ಬಗ್ಗೆ ಅಭ್ಯರ್ಥಿಗಳಿಗೆ ವೈಯಕ್ತಿಕವಾಗಿ ಮಾಹಿತಿಯನ್ನು ಕಳುಹಿಸಲಾಗುವುದಿಲ್ಲ.
- No individual intimation will be sent to candidates in this regard.

ಸೀಟು ಹಂಚಿಕೆಯ ನಂತರ ಶುಲ್ಕ ಮರುಪಾವತಿ ಮತ್ತು ಮುಟ್ಟುಗೋಲಿನ ಬಗ್ಗೆ ದಯಮಾಡಿ ಓದಲು ಕೋರಿದೆ.

ಕಾರ್ಯನಿರ್ವಾಹಕ ನಿರ್ದೇಶಕರು